## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## ಓ.ಎಸ್.224/2022

ಸಾಕ್ಷಿಯನ್ನು ದಿಃ **30.06.2025** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ವಾದಿ ಪರ ಶ್ರೀ HCK ವಕೀಲರಿಂದಃ-**

ನನ್ನ ತಂದೆಯ ಹೆಸರು ಸಣ್ಣೇಗೌಡ. ನನಗೆ ಓದಲು-ಬರೆಯಲು ಬರುವುದಿಲ್ಲ. ಕೇವಲ ಸಹಿ ಮಾಡುತ್ತೇನೆ. ನನ್ನ ತಂದೆ ಈ ದಾವೆಯ ಮೊದಲನೇ ಪ್ರತಿವಾದಿ ಎಂದರೆ ಸರಿ. ನನ್ನ ತಂದೆ ನ್ಯಾಯಾಲಯಕ್ಕ ಬಂದು ಸಾಕ್ಷಿ ಹೇಳಲು ತೊಂದರೆ ಇಲ್ಲ ಮತ್ತು ಅವರು ಆರೋಗ್ಯವಾಗಿ ಇದ್ದಾರೆ ಎಂದರೆ ಸರಿಯಲ್ಲ. ಅವರ ಆರೋಗ್ಯ ಚೆನ್ನಾಗಿಲ್ಲ. ನನ್ನ ತಂದೆ ಅವರ ದಿನನಿತ್ಯದ ಚಟುವಟಿಕೆಗಳನ್ನು ಸ್ವತಃ ಮಾಡಿಕೊಳ್ಳುತ್ತಿದ್ದಾರೆ. ನನ್ನ ತಂದೆ ಆರೋಗ್ಯವಾಗಿದ್ದು, ಹೊರಗೆ ಓಡಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನತಂದೆಗೆ ಸ್ವಯಾರ್ಜಿತವಾಗಿ ಬಂದಿದೆ ಎಂದರೆ ಸರಿ . ನನ್ನ ತಂ ದೆ 2006ರಲ್ಲಿ ಇದೇ ನ್ಯಾಯಾಲಯದಲ್ಲಿ ತನ್ನ ಸಹೋದರರು, ಸಹೋದರಿಯರು ಮತ್ತು ನನ್ನ ತಾಯಿಯ ವಿರುದ್ಧ ಒಂದು ದಾವೆ ಹೂಡಿದ್ದರು ಎಂದರೆ ಗೊತ್ತಿಲ್ಲ. ಕುಳ್ಳಮ್ಮ ಎಂದರೆ ನನ್ನ ತಂದೆಯ ಚಿಕ್ಕಮ್ಮ. ನನ್ನ ತಾತನ ಹೆಸರು ಮಾಲೇಗೌಡ ಉರುಫ್ ಪುಟ್ಟೇಗೌಡ. ನನ್ನ ತಾತನಿಗೆ 3 ಜನ ಪತ್ನಿಯರು. 3 ಜನ ಪತ್ನಿಯರ ಪೈಕಿ ಕುಳ್ಳಮ್ಮ ಬದುಕಿದ್ದರು. ಇನ್ನು ಇಬ್ಬರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಸಹೋದರಿ ಕರಗಮ್ಮ ಗೊತ್ತು. ಸದರಿ ಕರಗಮ್ಮ ನನ್ನ ತಾತನ ಹಿರಿಯ ಹೆಂಡತಿಯ ಮಗಳು. ಆಕೆಯ ತಾಯಿಯ ಹೆಸರು ಗೊತ್ತಿಲ್ಲ.

ನಮ್ಮ ಮನೆಯಲ್ಲಿ ನನ್ನ ತಂದೆ, ನಾನು, ನನ್ನ ತಮ್ಮ ಮತ್ತು ನನ್ನ ಪತ್ನಿ ಸಹಿ ಮಾಡುತ್ತೇವೆ. ನನ್ನ ಪತ್ನಿಯ ಹೆಸರು ವಿಜಯ. ಈ ದಾವೆಯ 1ನೇ ಪ್ರತಿವಾದಿ ನನ್ನ ತಂದೆ, 2ನೇ ಪ್ರತಿವಾದಿ ನಾನು, 3ನೇ ಪ್ರತಿವಾದಿ ನನ್ನ ಪತ್ನಿ, 4 ಮತುತ 5ನೇ ಪ್ರತಿವಾದಿಯರು ನನ್ನ ಮಕ್ಕಳು, 6ನೇ ಪ್ರತಿವಾದಿ ನನ್ನ ತಮ್ಮ, 7ನೇ ಪ್ರತಿವಾದಿ ನನ್ನ ತಮ್ಮನ ಪತ್ನಿ, 8 ಮತ್ತು 9ನೇ ಪ್ರತಿವಾದಿಯರು ನನ್ನ ತಮ್ಮನ ಮಕ್ಕಳು. ಸಾಕ್ಷಿ ನಿಪಿ-1 ರಲ್ಲಿರುವ ನಿಪಿ-1(ಎ) ಸಹಿಯನ್ನು ತನ್ನ ತಂದೆಯ ಸಹಿ ಎಂದು ಗುರುತಿಸುತ್ತಾರೆ. ಸಾಕ್ಷಿ ನಿಪಿ-1 ರಲ್ಲಿ ನಿಪಿ-1(ಬಿ) ಸಹಿಯನ್ನು ತನ್ನ ಸಹಿ ಎಂದು ಗುರುತಿಸುತ್ತಾರೆ. ಸಾಕ್ಷಿ ನಿಪಿ-1 ರಲ್ಲಿ ನಿಪಿ-1(ಸಿ) ಸಹಿಯನ್ನು ತನ್ನ ಸಹಿಯನ್ನು 6ನೇ ಪ್ರತಿವಾದಿಯ ಸಹಿಯನ್ನು ನಿಪಿ-1(ಡಿ) ಸಹಿಯನ್ನು

7ನೇ ಪ್ರತಿವಾದಿಯ ಸಹಿ ಎಂದು ಗುರುತಿಸುತ್ತಾರೆ. ಸಾಕ್ಷಿ ನಿಪಿ–1ರ ಪುಟ ಸಂಃ 2 ರಲ್ಲಿ ತನ್ನ, 1, 6 ಮತ್ತು 7ನೇ ಪ್ರತಿವಾದಿಯರ ಸಹಿಗಳನ್ನು ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ–1(ಕೆ ಯಿಂದ ಎನ್) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ–1ರ ಪುಟ ಸಂಃ 3 ರಲ್ಲಿ ನಿಪಿ–1(ಇ) ಸಹಿಯನ್ನು ತನ್ನ ತಂದೆಯ ಸಹಿ ಎಂದು ಹಾಗೂ ನಿಪಿ–1(ಎಫ್) ಸಹಿಯನ್ನು ನನ್ನ ಮತ್ತು ನನ್ನ ಮೈನರ್ ಮಕ್ಕಳ ಪರವಾಗಿ ಹಾಕಲಾಗಿದೆ ಎಂದು ನಿಪಿ–1(ಜಿ) ಮತ್ತು (ಹೆಚ್ ) ಸಹಿಗಳನ್ನು 6 ಮತ್ತು 7ನೇ ಪ್ರತಿವಾದಿಯರು ತಮ್ಮ ಮತ್ತು ತಮ್ಮ ಮೈನರ್ ಮಕ್ಕಳ ಪರವಾಗಿಯೂ ಹಾಕಿದ್ದಾರೆ ಎಂದು ಹಾಗೂ ಶೋಭಾ ಎಂದು ಇಂಗ್ಲಿಷ್ ನಲ್ಲಿ ಸಹಿ ಇರುವುದಾಗಿ ನುಡಿಯುತ್ತಾರೆ. ನಿಪಿ–1 ರಲ್ಲಿರುವ ಮೊದಲನೇ ಸಾಕ್ಷಿ ಸುರೇಶ ಬಿನ್ ಹಾಲೇಗೌಡ ಎಂದರೆ ನನ್ನ ಊರಿನವರು. ನಿಪಿ–1 ರಲ್ಲಿರುವ 2ನೇ ಸಾಕ್ಷಿ ಸ್ವಾಮಿಗೌಡ ಬಿನ್ ಲೇಟ್ ಹಾಲೇಗೌಡ ಎಂದರೆ ನಮ್ಮ ಊರಿನಲ್ಲಿ ಆ ಹೆಸರಿನವರು ತುಂಬಾ ಜನ ಇದ್ದಾರೆ. ಸಾಕ್ಷಿ ನಿಪಿ–2 ರ 1 ರಿಂದ 3ನೇ ಪುಟಗಳಲ್ಲಿ ತನ್ನ, 1ನೇ ಪ್ರತಿವಾದಿ, 3ನೇ ಪ್ರತಿವಾದಿ, 6 ಮತ್ತು 7ನೇ ಪ್ರತಿವಾದಿಯರ ಸಹಿಗಳನ್ನು ಗುರುತಿಸಿದ್ದು, ಸದರಿ ಸಹಿಗಳನ್ನು ಒಟ್ಟಾಗಿ ನಿಪಿ–2(ಎ) ಯಿಂದ (ಇ)ಎಂದು ಗುರುತಿಸಲಾಯಿತು. ಸದರಿ ಪುಟಗಳಲ್ಲಿ ಸಾಕ್ಷಿಯು ವಾದಿಯ ಸಹಿಯನ್ನು ಗುರುತಿಸಿದ್ದು, ಅದನ್ನು ಒಟ್ಟಾಗಿ ನಿಪಿ–2(ಎಫ್) ಎಂದು ಗುರುತಿಸಲಾಯಿತು.

ಸಾಕ್ಷಿ ನಿಪಿ–2ರ ಪುಟ ಸಂಃ 4 ರಲ್ಲಿ ತನ್ನ ತಂದೆಯ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ–2(ಜಿ) ಎಂದು, ಗುರುತಿಸಲಾಯಿತು. ಸದರಿ ಪುಟದಲ್ಲಿ ಸಾಕ್ಷಿ ತನ್ನ ಹಾಗೂ 3ನೇ ಪ್ರತಿವಾದಿಯ ಸಹಿಯನ್ನು ನನಗೂ ಮತ್ತು ನನ್ನ ಮೈನರ್ ಮಕ್ಕಳ ಪರವಾಗಿ ಹಾಕಲಾಗಿದೆ ಎಂದು ಬರೆದಿರುವುದಾಗಿ ಹೇಳಿದ್ದು, ಸದರಿ ಸಹಿಗಳನ್ನು ನಿಪಿ–2(ಹೆಚ್) ಮತ್ತು (ಐ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ–2ರ 4ನೇ ಪುಟದಲ್ಲಿ 6ನೇ ಪ್ರತಿವಾದಿಯ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ–2(ಜೆ) ಎಂದು ಹಾಗೂ ಸದರಿ ಪುಟದಲ್ಲಿ ಸಾಕ್ಷಿ 6 ಮತ್ತು 7ನೇ ಪ್ರತಿವಾದಿಗಳ ಸಹಿಗಳನ್ನು ನನಗೂ ಮತ್ತು ನನ್ನ ಮೈನರ್ ಮಕ್ಕಳ ಪರವಾಗಿಯೂ ಸಹ ಎಂದು ಬರೆದಿರುವುದಾಗಿ ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ–2(ಕೆ) ಮತ್ತು (ಎಲ್) ಎಂದು ಗುರುತಿಸಲಾಗಿದೆ. ನಿಪಿ–2ರಲ್ಲಿ 1ನೇ ಸಾಕ್ಷಿ ಹಾಕಿರುವ ಸುರೇಶ ಬಿನ್ ಹಾಲೇಗೌಡ ಗೊತ್ತು, ಸದರಿ ಸಹಿಯನ್ನು ನಿಪಿ–2(ಎಂ) ಎಂದು ಗುರುತಿಸಲಾಯಿತು. ನಿಪಿ–2ಕ್ಕೆ ವಾದಿಯ ಗಂಡ ವಿಕ್ರಮ್ ಜಿದ್ ಸಿಂಗ್ ನನಗೆ ಗೊತ್ತು.

ಸಾಕ್ಷಿ ನಿಪಿ–2ಕ್ಕೆ ಅವರು ಸಾಕ್ಷಿಯಾಗಿ ಸಹಿ ಹಾಕಿರುವುದಾಗಿ ಒಪ್ಪಿಕೊಂಡಿದ್ದು, ಸದರಿ ಸಹಿಯನ್ನು ನಿಪಿ–2(ಎನ್) ಎಂದು ಗುರುತಿಸಲಾಯಿತು.

ಸಾಕ್ಷಿ ದಿಃ 05.01.2023 ರಂದು ಸಲ್ಲಿಸಿದ ವಕಾಲತ್ ನಲ್ಲಿ ತನ್ನ ಮತ್ತು 6ನೇ ಪ್ರತಿವಾದಿಯ ಸಹಿಯನ್ನು ಗುರುತಿಸುತ್ತಾರೆ. ಸಾಕ್ಷಿ ದಿಃ 09.02.2022 ರಂದು ಸಲ್ಲಿಸಿರುವ ವಕಾಲತ್ ನಲ್ಲಿ ತನ್ನ ಹಾಗೂ 1, 3, 4, 6 ಮತ್ತು 7ನೇ ಪ್ರತಿವಾದಿಯರ ಸಹಿಗಳನ್ನು ಗುರುತಿಸುತ್ತಾರೆ. ಈ ದಾವೆಗೆ ಎಲ್ಲರೂ ಅವರವರ ಪರವಾಗಿ ಸಹಿ ಹಾಕಿ ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಪ್ರತಿವಾದ ಪತ್ರವನ್ನು ಸಲ್ಲಿಸಲು ನಾನು 1 ಮತ್ತು 6ನೇ ಪ್ರತಿವಾದಿ ಮಾಹಿತಿ ನೀಡಿದ್ದೇನೆ.

ನಾನು ವ್ಯವಸಾಯ ಮಾಡುತ್ತೇನೆ. ಈಗ ನನ್ನ ತಂದೆಯ ಹೆಸರಿನಲ್ಲಿ ಒಂದು ಕಾಲು ಎಕರೆ ಜಮೀನು ಇದೆ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.